## ಶ್ರೀ ಆರ್.ಟಿ.ದೇಸಾಯಿ ಕರ್ನಾಟಕ ಪಬ್ಲಿಕ್ ಶಾಲೆ ನೀರಬೂದಿಹಾಳ ತಾ: ಬಾದಾಮಿ ಜಿ: ಬಾಗಲಕೋಟ

## 2022–23 ನೇ ಸಾಲಿನ ಕಲಿಕಾ ಚೇತರಿಕೆ ಉಪಕ್ರಮ ಪೂರ್ವ ಚಟಿವಟಿಕೆಗಳು ಜೂನ್ 1 ರಿಂದ

**ತರಗತಿ : 8ನೇ & 9ನೇ** **ವಿಷಯ : ಸಮಾಜವಿಜ್ಞಾನ** **ವಿಷಯ ಶಿಕ್ಷಕರು:**

| ಕ್ರಸಂ | ದಿನಾಂಕ | ವಾರ | 6 ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕಾ ಚೇತರಿಕೆ ಉಪಕ್ರಮದ ಪೂರ್ವ ಸಿದ್ಧತಾ ಚಟುವಟಿಕೆಗಳಾಗಿ ಬಳಸಬಹುದಾದ ಚಟುವಟಿಕೆಗಳು: |
|---|---|---|---|
| 1 | 01–06–22 | Wednesday | ❖ ಆಯಾಯ ತರಗತಿಯ ವಿದ್ಯಾರ್ಥಿಗಳಿಗೆ ಗ್ರಾಮ, ಹೋಬಳಿ, ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರದ ಪರಿಚಯ ಇರುವುದನ್ನು ಖಾತ್ರಿಪಡಿಸಿಕೊಳ್ಳಲು, ಇವುಗಳನ್ನು ಪರಿಚಯಿಸುವ ಚಟುವಟಿಕೆ ನೀಡುವುದು ಹಾಗೂ ಗುಂಪು ಮಂಡನೆಗೆ ಅವಕಾಶ ನೀಡುವುದು. |
| 2 | 02–06–22 | Thursday | ❖ ಶಾಲೆ ಇರುವ ಗ್ರಾಮ/ಪಟ್ಟಣದಲ್ಲಿ ಇರುವ ಐತಿಹಾಸಿಕ ಸ್ಮಾರಕ/ಕಟ್ಟಡ/ಸ್ಥಳಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ತರಗತಿಯಲ್ಲಿ ಮಂಡಿಸುವ ಚಟುವಟಿಕೆಗಳನ್ನು ನೀಡುವುದು. ಇದನ್ನು ಗುಂಪು ಚಟುವಟಿಕೆಗಳಾಗಿ ನೀಡಬಹುದು. ಶಿಕ್ಷಕರು ಸೂಕ್ತ ಹಿಮ್ಮಾಹಿತಿ ನೀಡುವುದು. |
| 3 | 03–06–22 | Friday | ❖ ವಿದ್ಯಾರ್ಥಿಗಳಿಗೆ ವಿವಿಧ ಸ್ವರೂಪದ ನಕ್ಷೆಗಳನ್ನು ಒದಗಿಸಿ ಅದನ್ನು ಬಳಸಿ ಅವರು ಗ್ರಹಿಸುವ ವಿವರಗಳನ್ನು ಚಾರ್ಟ್ ನಲ್ಲಿ ದಾಖಲಿಸುವ ಚಟುವಟಿಕೆ ನೀಡಬಹುದು. ದಾಖಲಿಸಿದ ವಿವರಗಳು ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿರುವ ಆಧಾರದ ಮೇಲೆ ಅಗತ್ಯ ಹಿಮ್ಮಾಹಿತಿಗಳನ್ನು ನೀಡುವುದು. |
| 4 | 04–06–22 | Saturday | ❖ ಸಮಾಜ ವಿಜ್ಞಾನದ ವಿಷಯ ಥೀಮ್ ಅನುಸಾರ ವಿದ್ಯಾರ್ಥಿಗಳು ಅವಲೋಕಿಸಿದ ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳುವ ಕ್ರಮಗಳನ್ನು ಪರಿಚಯಿಸುವುದು (ಶಾಲೆಯಲ್ಲಿರುವ ಸೌಲಭ್ಯಗಳು/ಅಂಚೆಕಛೇರಿ/ ಗ್ರಾಮದ ರಸ್ತೆಗಳು/ನಾಗರೀಕ ಸೌಲಭ್ಯಗಳು ಇತ್ಯಾದಿ). ವಿದ್ಯಾರ್ಥಿಗಳು ಸಿದ್ಧಪಡಿಸಿದ ಟಿಪ್ಪಣಿಗಳನ್ನು ತರಗತಿಯಲ್ಲಿ ಓದಿಸಿ ಸಹಪಾಠಿಗಳಿಂದ ಹಿಮ್ಮಾಹಿತಿ ನೀಡಬಹುದು. ಒಂದು ಐತಿಹಾಸಿಕ ಸ್ಥಳಕ್ಕೆ ಭೇಟಿ ನೀಡಿದಾಗ ಮಾಡಿಕೊಳ್ಳಬಹುದಾದ ಟಿಪ್ಪಣಿಯ ಸ್ವರೂಪವನ್ನು ಪರಿಚಯಿಸಿ ಹೆಚ್ಚು ವಿವರಗಳನ್ನು ನೀಡಬಹುದು. |
| 5 | 05–06–22 | Sunday | – |

| ಕ್ರಸಂ | ದಿನಾಂಕ | ವಾರ | 6 ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕಾ ಚೇತರಿಕೆ ಉಪಕ್ರಮದ ಪೂರ್ವ ಸಿದ್ಧತಾ ಚಟುವಟಿಕೆಗಳಾಗಿ ಬಳಸಬಹುದಾದ ಚಟುವಟಿಕೆಗಳು: |
|---|---|---|---|
| 6 | 06–06–22 | Monday | ❖ ಗ್ರಾಮದಲ್ಲಿರುವ ವಿವಿಧ ಜಲಮೂಲಗಳ ಸಮೀಕ್ಷೆ ಮಾಡಿಸಿ ಅದರ ಮುಖ್ಯಾಂಶಗಳನ್ನು ಪ್ರಸ್ತುತಿಪಡಿಸಲು ಅವಕಾಶ ಕಲ್ಪಿಸುವುದು. ಮಂಡನೆಯಲ್ಲಿ ಸಮಾಜ ವಿಜ್ಞಾನದ ಅಂಶಗಳು ಇರುವ ಅಥವಾ ಇಲ್ಲದಿರುವ ಅಂಶಗಳನ್ನು ಗ್ರಹಿಸಿ ಅಗತ್ಯ ಹಿಮ್ಮಾಹಿತಿ ಒದಗಿಸುವುದು. |
| 7 | 07–06–22 | Tuesday | ❖ ಸ್ಥಳೀಯ ಬೆಳೆಗಳು-ಅದರ ಮಾರುಕಟ್ಟೆ-ಸವಾಲುಗಳ ಕುರಿತು ತರಗತಿ ಹಂತದ ಚರ್ಚೆಗಳನ್ನು ಏರ್ಪಡಿಸುವುದು. ಶಿಕ್ಷಕರು ವಿದ್ಯಾರ್ಥಿಗಳ ಮಂಡನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿ ಭೂಗೋಳ ಶಾಸ್ತ್ರ, ಅರ್ಥಶಾಸ್ತ್ರ, ಹಾಗೂ ವಾಣಿಜ್ಯ ಶಾಸ್ತ್ರ, ಇತ್ಯಾದಿ ವಿಭಾಗಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡುವುದು. |
| 8 | 08–06–22 | Wednesday | ❖ ಕಾಲ ರೇಖೆಗಳನ್ನು ಸಿದ್ಧಪಡಿಸುವ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿ, ಇದರಲ್ಲಿ ಸಮಾಜ ವಿಜ್ಞಾನದ ಪರಿಕಲ್ಪನೆ, ಘಟನೆ ಮತ್ತು ಕಾಲ ಮುಂತಾದ ಅಂಶಗಳ ಬಗ್ಗೆ ಸ್ಪಷ್ಟತೆ ಹೊಂದಿರುವುದನ್ನು ಖಚಿತಪಡಿಸಿಕೊಳ್ಳುವುದು. ಪರಿಕಲ್ಪನೆಯಲ್ಲಿ ದೋಷಗಳು ಕಂಡುಬಂದಲ್ಲಿ ಅವುಗಳಿಗೆ ಸಂಬಂಧಿಸಿದ, ಶಿಕ್ಷಕರು ಸಿದ್ಧಪಡಿಸಿದ ವಿಶೇಷ ತರಗತಿ ಚಟುವಟಿಕೆಗಳನ್ನು ಆಯೋಜಿಸಬಹುದು. |
| 9 | 09–06–22 | Thursday | ❖ ವಂಶವೃಕ್ಷ ಚಾರ್ಟ್ ತಯಾರಿಸಿ ಅದನ್ನು ವಿವರಿಸುವ ಚಟುವಟಿಕೆ ನೀಡುವುದು. ವಿದ್ಯಾರ್ಥಿಗಳು ಇದನ್ನು ಇತಿಹಾಸದಲ್ಲಿ ಉಲ್ಲೇಖಿತ ರಾಜವಂಶಗಳಿಗೆ ಸಮ್ಮಿಳಿತಗೊಳಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು. ಅಗತ್ಯವಿರುವಲ್ಲಿ ರಾಜವಂಶದ ಚಾರ್ಟ್ ತಯಾರಿಯ ಐತಿಹಾಸಿಕ ಕಾಲಗಣನೆಯ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ನೀಡುವುದು. |

| ಕ್ರಸಂ | ದಿನಾಂಕ | ವಾರ | 6 ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕಾ ಚೇತರಿಕೆ ಉಪಕ್ರಮದ ಪೂರ್ವ ಸಿದ್ಧತಾ ಚಟುವಟಿಕೆಗಳಾಗಿ ಬಳಸಬಹುದಾದ ಚಟುವಟಿಕೆಗಳು: |
|---|---|---|---|
| 10 | 10–06–22 | Friday | ❖ ಬ್ಯಾಂಕ್ ಅಥವಾ ಅಂಚೆ ಕಛೇರಿ ಹಾಗೂ ಶಾಲಾ ಸಂಸತ್ತು ಕಾರ್ಯನಿರ್ವಹಣೆಯ ಅಣಕು ಪ್ರದರ್ಶನ ಏರ್ಪಡಿಸಿ ವಿಷಯದ ಹಿನ್ನಲೆಯಲ್ಲಿ ಗ್ರಹಿಸಿದ ಅಂಶಗಳನ್ನು ಆಧರಿಸಿ ವಿದ್ಯಾರ್ಥಿಗಳಿಗೆ ಕಲಿಕಾ ಅನುಭವಗಳನ್ನು ಒದಗಿಸುವುದು. |
| 11 | 11–06–22 | Saturday | ❖ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳನ್ನು ಪರಿಚಯಿಸುವ ಚಟುವಟಿಕೆಗಳನ್ನು ನೀಡಿ ಮಂಡನೆಯ ಸಂದರ್ಭದಲ್ಲಿ ಅಗತ್ಯ ಹಿಮ್ಮಾಹಿತಿ ನೀಡುವುದು. |
| 12 | 12–06–22 | Sunday | |
| 13 | 13–06–22 | Monday | ❖ ವೃತ್ತ ಪತ್ರಿಕೆಗಳಲ್ಲಿ ಬಂದಿರುವ ಐತಿಹಾಸಿಕ ಮತ್ತು ಸುದ್ದಿ ವಿಶ್ಲೇಷಣೆ ಚಟುವಟಿಕೆ ಕೈಗೊಳ್ಳುವುದು. ಸುಗಮಕಾರರು ಹೆಚ್ಚು ಸಂವೇದನಾಶೀಲರಾಗಿ ಈ ಚಟುವಟಿಕೆಯನ್ನು ನಿರ್ವಹಿಸಬೇಕು. ಯಾವುದೇ ದ್ವೇಷ ಪೂರ್ವಾಗ್ರಹಗಳು ಬೆಳೆಯದಂತೆ ಎಚ್ಚರಿಕೆ ವಹಿಸುವುದು. |
| 14 | 14–06–22 | Tuesday | |

| ಕ್ರಸಂ | ದಿನಾಂಕ | ವಾರ | 6 ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕಾ ಚೇತರಿಕೆ ಉಪಕ್ರಮದ ಪೂರ್ವ ಸಿದ್ಧತಾ ಚಟುವಟಿಕೆಗಳಾಗಿ ಬಳಸಬಹುದಾದ ಚಟುವಟಿಕೆಗಳು: |
|---|---|---|---|
| 15 | 15-06-22 | Wednesday | |
| 16 | 16-06-22 | Thursday | |
| 17 | 17-06-22 | Friday | |
| 18 | 18-06-22 | Saturday | |
| 19 | 19-06-22 | Sunday | |

| ಕ್ರಸಂ | ದಿನಾಂಕ | ವಾರ | 6 ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕಾ ಚೇತರಿಕೆ ಉಪಕ್ರಮದ ಪೂರ್ವ ಸಿದ್ಧತಾ ಚಟುವಟಿಕೆಗಳಾಗಿ ಬಳಸಬಹುದಾದ ಚಟುವಟಿಕೆಗಳು: |
|---|---|---|---|
| 20 | 20–06–22 | Monday | |